# ಮನ್ ಕಿ ಬಾತ್

ಸಂಪುಟ 5



# MANN KI BAAT
## VOL.5

**Authors**
Sarda Mohan and Tanushree Banerji

**Illustrations and Cover Art**
Dilip Kadam

**Assistant Artist**
Ravindra Mokate

**Production**
Amar Chitra Katha

**Published by**
Amar Chitra Katha Pvt. Ltd

**KANNADA**

ISBN – 978-81-19596-36-2

Amar Chitra Katha Pvt. Ltd, August 2023

© Ministry of Culture, Govt of India, August 2023
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with **ACK Learn**, a unique learning platform that brings these stories to your school with a range of workshops. Find out more at **www.acklearn.com** or write to us at **acklearn@ack-media.com**.



ಪ್ರೀತಿಯ ಮಕ್ಕಳೇ,

ನಮ್ಮ ದೇಶ ಮತ್ತು ಭೂಮಿಯ ಭವಿಷ್ಯವು ನಮ್ಮ ಯುವ ಜನಾಂಗದ ಕೈಯಲ್ಲಿದೆ. ನಾವು ವಿಶ್ವದ ಅತ್ಯಂತ ಸಂತೋಷದಾಯಕ ಮತ್ತು ಸಮೃದ್ಧ ರಾಷ್ಟ್ರದ ಸ್ಥಾನಕ್ಕೆ ಏರುತ್ತೇವೆಯೋ ಇಲ್ಲವೋ ಎಂಬುದು ನಿಮ್ಮನ್ನು ಅವಲಂಬಿಸಿದೆ.

ನಮ್ಮ ಹಿಂದಿನ ತಲೆಮಾರಿನವರು ಮತ್ತು ನಾವು, ನಮ್ಮ ಶಕ್ತಿ ಮೀರಿ ಪ್ರಯತ್ನಿಸಿದ್ದೇವೆ. ಹಲವು ತಪ್ಪುಗಳನ್ನು ಕೂಡ ಮಾಡಿದ್ದೇವೆ. ನಿಮ್ಮ ಪ್ರಯತ್ನ ಮತ್ತು ತಪ್ಪುಗಳಿಂದ ನೀವು ಪಾಠ ಕಲಿಯಬೇಕು. ಭಾರತ ದೇಶವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಬೇಕು. ಆದ್ದರಿಂದ ನಮ್ಮ ಬದುಕನ್ನು ಸುಧಾರಿಸಲು ಶ್ರಮಿಸಿದ, ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸುತ್ತಿರುವ, ಕಳೆದು ಹೋದದ್ದನ್ನು ಮತ್ತೆ ಗಳಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಮತ್ತು ನಮಗೆ ಭರವಸೆಯಾಗಿರುವ ಯುವಕರ ಕೆಲಸವನ್ನು ನಿಮಗೆ ಪರಿಚಯಿಸಲು ಇಷ್ಟಪಡುತ್ತೇನೆ.

ಮನ್ ಕಿ ಬಾತ್, ಕಾಮಿಕ್‌ನ 5ನೆಯ ಸಂಪುಟದಲ್ಲಿ ‘ಕಾವಿ’ ಎಂಬ ನಿರ್ನಾಮವಾಗಿದ್ದ ಕಲಾ ಪ್ರಕಾರಕ್ಕೆ ಮತ್ತೆ ಜೀವ ತುಂಬಿದ ಸಾಗರ್‌ಮುಳೆಯವರ ಬಗ್ಗೆ ಹೇಳಲು ಇಚ್ಛಿಸುತ್ತೇನೆ.

ಹಾಗೆಯೇ, ಕೇವಲ 13 ವರ್ಷ ವಯಸ್ಸಿನಲ್ಲೇ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಜಗತ್ತಿನ ಅತ್ಯಂತ ಕಿರಿಯ ಹುಡುಗಿ ಎಂದು ಪ್ರಸಿದ್ಧಿ ಪಡೆದಿರುವ ಪೂರ್ಣಾ ಮಾಳವತ್ ಎಂಬ ಹೆಣ್ಣುಮಗಳ ಶೌರ್ಯ, ಸಾಹಸ, ಹೋರಾಟಗಳ ಬಗ್ಗೆ ಹೇಳುತ್ತಿದ್ದೇನೆ.

ಕೇವಲ ಆರು ವರ್ಷ ವಯಸ್ಸಿನಲ್ಲೇ ಪ್ರಾರಂಭಿಸಿ ತನ್ನ ಅಜ್ಜನೊಡಗೂಡಿ ಔಷಧೀಯ ಗಿಡಮೂಲಿಕೆಗಳ ಬಗ್ಗೆ, ಅವುಗಳ ರೋಗ ಶಮನ ಶಕ್ತಿಯ ಬಗ್ಗೆ ತಿಳಿದುಕೊಳ್ಳುತ್ತಾ ಬಂದಿರುವ ಪಟಯತ್ ಸಾಹು ಬಗ್ಗೆ ಕೂಡ ನೀವು ತಿಳಿದುಕೊಳ್ಳುವಿರಿ.

ಕುತೂಹಲಿಗಳಾಗಿ, ಸದಾ ಕಲಿಯಲು ಸಿದ್ಧರಾಗಿರಿ ಮತ್ತು ಸವಾಲುಗಳನ್ನು ಎದುರಿಸಲು ಹಿಂಜರಿಯಬೇಡಿ.

# ಪರಿವಿಡಿ


| | | |
|---|---|---|
| 1 | ಸಾಗರ್ ನಾಯಕ್ ಮುಳೆ | 3 |
| 2 | ಪಟಾಯತ್ ಸಾಹು | 6 |
| 3 | ಚಂದ್ರ ಕಿಶೋರ್ ಪಾಟೀಲ್ | 9 |
| 4 | ಜತಿನ್ ಲಲಿತ್ ಸಿಂಗ್ | 11 |
| 5 | ರೋಹನ್ ಕಾಳೆ | 14 |
| 6 | ಶ್ಯಾಮ್ ಸಿಂಗ್ ಮತ್ತು ಕುನ್ವರ್ ಸಿಂಗ್ | 17 |
| 7 | ಗೌತಮ್ ದಾಸ್ | 20 |
| 8 | ಅರುಣ್ ಕೃಷ್ಣಮೂರ್ತಿ | 22 |
| 9 | ಪೂರ್ಣಾ ಮಾಳವತ್ | 25 |
| 10 | ವಿಕ್ರಮಜಿತ್ ಚಕ್ಮಾ | 28 |
| 11 | ಮನೋಜ್ ಬೆಂಜ್ವಾಲ್ | 30 |

# ಸಾಗರ್ ನಾಯಕ್ ಮುಳೆ




*ಗೋವಾ, ಕರ್ನಾಟಕ ಮತ್ತು ಮಹಾರಾಷ್ಟ್ರದ ಪಶ್ಚಿಮ ಕರಾವಳಿಯುದ್ದಕ್ಕೂ ಇರುವ ಪ್ರದೇಶ




*ಕುಲಕ್ಕೆ ಸೇರಿದ ದೇವತೆಗಳು




*ಅನೇಕ ದೇಶಗಳ ನಡುವಿನ ಆರ್ಥಿಕ ಸಹಕಾರಕ್ಕಾಗಿ ವೇದಿಕೆ

# ಪಟಾಯತ್ ಸಾಹು




* ಒಡಿಶಾದ ಜಿಲ್ಲೆ

**ಒಡಿಯಾ ಭಾಷೆಯಲ್ಲಿ ಅಜ್ಜ

^ಸಾಂಪ್ರದಾಯಿಕ ವೈದ್ಯ




*ಕಾಲಾಹಂಡಿ ಜಿಲ್ಲೆಯ ಪಾರಂಪರಿಕ ವೈದ್ಯರ ಸಮೂಹ

^ ಒಡಿಯಾ ಭಾಷೆಯಲ್ಲಿ ತಂದೆ




*ಗುಣಪಡಿಸುವ ಮೂಲಿಕೆ
^ಒಣ ಶುಂಠಿಯುಳ್ಳ ಮೂಲಿಕೆ ಪುಡಿ

# ಚಂದ್ರ ಕಿಶೋರ್ ಪಾಟೀಲ್




*ಗೋದಾವರಿ ನದಿಯ ಉಪನದಿ

^ಹಿಂದೂ ಹಬ್ಬ

**ಗಾಳಿಪಟ ಹಾರಿಸಲು ಬಳಸಲಾಗುವ ಗಾಜಿನ ಪುಡಿ ಲೇಪಿತ ದಾರ




*ಹಿಂದಿ ಭಾಷೆಯಲ್ಲಿ ಅಣ್ಣ

^ವಿಜಯದಶಮಿ ಎಂದೂ ಕರೆಯಲಾಗುವ ನಾಡಹಬ್ಬ

# ಜತಿನ್ ಲಲಿತ್ ಸಿಂಗ್




*ಉತ್ತರ ಪ್ರದೇಶದ ಒಂದು ಜಿಲ್ಲೆ
^ಹಿಂದಿ ಭಾಷೆಯಲ್ಲಿ ಅಣ್ಣ


ಈ ಕೇಂದ್ರವನ್ನು ನಿರ್ಮಿಸುತ್ತಿದ್ದಾಗ, ಜತಿನ್ ಮತ್ತು ಅವನ ಸ್ನೇಹಿತರು ಪುಸ್ತಕ ಸಂಗ್ರಹಿಸುವ ಕೆಲಸವನ್ನು ಪ್ರಾರಂಭಿಸಿದರು. ಕೆಲವು ವಾರಗಳ ನಂತರ -
ಈಗ ನಮ್ಮ ಬಳಿ ಹಿಂದಿ ಮತ್ತು ಇಂಗ್ಲಿಷ್ ಸಾಹಿತ್ಯದ 100 ಕ್ಕೂ ಹೆಚ್ಚು ಪುಸ್ತಕಗಳಿವೆ, ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಕೆಲವು ಪುಸ್ತಕಗಳೂ ಇವೆ.
ಎಲ್ಲರೂ ಅತ್ಯುತ್ತಮ ಕೆಲಸ ಮಾಡಿರುವಿರಿ! ಎಲ್ಲರೊಂದಿಗೂ ಈ ವಿಚಾರವನ್ನು ಹಂಚಿಕೊಳ್ಳುತ್ತಲೇ ಇರೋಣ.
ನವೆಂಬರ್ 2020 ರಲ್ಲಿ -
ಬನ್ಸಾ ಕಮ್ಯುನಿಟಿ ಲೈಬ್ರರಿ ಅಂಡ್ ರಿಸೋರ್ಸ್ ಸೆಂಟರ್‌ಗೆ ಸುಸ್ವಾಗತ. ಲೈಬ್ರರಿಯನ್ನು ಬಳಸಲು ಯಾವುದೇ ಶುಲ್ಕವಿರುವುದಿಲ್ಲ, ಹಾಗೆಯೇ ಪುಸ್ತಕಗಳನ್ನು ತಡವಾಗಿ ಹಿಂತಿರುಗಿಸಿ ಕೊಟ್ಟರೆ ಯಾವುದೇ ದಂಡಶುಲ್ಕವಿರುವುದಿಲ್ಲ.
Y & RESOURCE CENTRE
ಇದು ಅದ್ಭುತ!
ಸುತ್ತಮುತ್ತಲಿನ ಜನರಿಗೆ ಲೈಬ್ರರಿಗೆ ಭೇಟಿ ನೀಡುವಂತೆ ಪ್ರೋತ್ಸಾಹಿಸುವ ಕೆಲಸವನ್ನು ಸ್ವಯಂಸೇವಕರ ತಂಡವೊಂದು ಮಾಡುತ್ತಿತ್ತು.
ಮಕ್ಕಳು ಮತ್ತು ಯುವಜನರೊಂದಿಗೆ, ಮಹಿಳೆಯರೂ ಗ್ರಂಥಾಲಯಕ್ಕೆ ಭೇಟಿ ನೀಡಲು ಪ್ರಾರಂಭಿಸಿದರು.
ನನ್ನ ಶಾಲಾ ದಿನಗಳ ನಂತರ ನಾನು ಪುಸ್ತಕಗಳನ್ನು ಓದಲೇ ಇಲ್ಲ. ಇಲ್ಲಿ ಹಲವಾರು ಪುಸ್ತಕಗಳಿವೆ.
ಒಟ್ಟಾಗಿ ಓದಲು ನಾವು ಕೆಲವೊಮ್ಮೆ ಇಲ್ಲಿ ಭೇಟಿಯಾಗಬಹುದು.
ಮಾರ್ಚ್ 2021 ರಲ್ಲಿ ಕೋವಿಡ್ ರೋಗದ ಎರಡನೇ ಅಲೆಯು ಅಪ್ಪಳಿಸಿದಾಗ, ಜತಿನ್ 'ರೂರಲ್ ಕೋವಿಡ್ ರಿಲೀಫ್ ವರ್ಕ್' ಎಂಬ ಅಭಿಯಾನವನ್ನು ಪ್ರಾರಂಭಿಸಿದರು.
ಇಂದು ನಿಮ್ಮ ದೇಹದ ಉಷ್ಣತೆ ಮತ್ತು ಆಮ್ಲಜನಕದ ಮಟ್ಟದ ರೀಡಿಂಗ್‌ಗಳನ್ನು ಪರಿಶೀಲಿಸಲು ನಾವು ಇಲ್ಲಿಗೆ ಬಂದಿದ್ದೇವೆ. ನೀವು ಹೇಗಿದ್ದೀರಿ?
ನನ್ನ ಪತಿ ಕೆಲಸ ಕಳೆದುಕೊಂಡರು. ದಿನಸಿ ಅಥವಾ ಔಷಧಿ ಖರೀದಿಸಲು ನಾವು ತುಂಬಾ ಕಷ್ಟಪಡುತ್ತಿದ್ದೇವೆ.
ನೀವು ಒಂಟಿಯಲ್ಲ, ಸಮುದಾಯವು ನಿಮ್ಮೊಂದಿಗಿದೆ. ನಾವು ನಿಮಗೆ ರೇಷನ್ ಕಿಟ್ ಕೊಡುತ್ತೇವೆ ಮತ್ತು ನಿಮ್ಮ ಆರೋಗ್ಯ ವೆಚ್ಚಗಳನ್ನು ನಿಭಾಯಿಸಲು ನಿಮಗೆ ಸಹಾಯ ಮಾಡುತ್ತೇವೆ.
ನಾನು ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ!
ಜತಿನ್ ಮತ್ತು ಅವನ ತಂಡವು ಹಣ ಸಂಗ್ರಹಿಸಿ, ಬನ್ಸಾ ಮತ್ತು ಸುತ್ತಮುತ್ತಲಿನ ಹಳ್ಳಿಗಳ 11000 ಕ್ಕೂ ಹೆಚ್ಚು ಜನರಿಗೆ ನೆರವು ನೀಡಿತು. ಇವರು ಹಳ್ಳಿಗರಿಗೆ ಕೋವಿಡ್ ವ್ಯಾಕ್ಸಿನೇಷನ್‌ಗಳನ್ನು ಪಡೆಯಲು ಸಹ ಸಹಾಯ ಮಾಡಿದರು.


ಹಲವು ತಿಂಗಳುಗಳ ನಂತರ, ಕೋವಿಡ್ ಸಾಮಾನ್ಯ ಸ್ಥಿತಿ ಮರಳಿದಾಗ -
ಸಾಂಕ್ರಾಮಿಕ ರೋಗದ ಸಮಯದಲ್ಲಿ ನೀವು ಪಟ್ಟ ಶ್ರಮ ಮತ್ತು ಎಲ್ಲಾ ಪ್ರಯತ್ನಗಳಿಗೆ ಧನ್ಯವಾದಗಳು. ಈಗ ನಾವು, ಬನ್ಸಾದಿಂದ ಹೊರಗೆ, ಓದುವ ಪ್ರೀತಿಯನ್ನು ಹರಡಲು ಮಾರ್ಗಗಳನ್ನು ಕಂಡುಕೊಳ್ಳಬೇಕು.
ಮಕ್ಕಳಲ್ಲಿ ಓದುವ ಪ್ರೀತಿಯನ್ನು ಮೂಡಿಸಲು ಶಾಲೆಗಳಲ್ಲಿ ಓದುವ ಕಾರ್ಯಾಗಾರಗಳನ್ನು ಆಯೋಜಿಸೋಣ.
ಜತಿನ್ ಮತ್ತು ಅವರ ತಂಡವು ಹಾರ್ದೋಯ್ ಜಿಲ್ಲೆಯಾದ್ಯಂತ ಪ್ರಯಾಣಿಸಿ, ಸ್ಥಳೀಯ ಶಾಲೆಗಳಲ್ಲಿ ಕಾರ್ಯಾಗಾರಗಳನ್ನು ನಡೆಸುತ್ತಿತ್ತು.
ಜತಿನ್ ಭೈಯ್ಯಾ, ನೀವು ನಮಗಾಗಿ ಓದಿದ ಪುಸ್ತಕಗಳು ಅದ್ಭುತವಾಗಿವೆ. ನಾವು ಲೈಬ್ರರಿಯಿಂದ ಹೆಚ್ಚಿನ ಪುಸ್ತಕಗಳನ್ನು ಪಡೆಯಬಹುದೇ?
ನಾವು ಬುಕ್ ಕ್ಲಬ್ ಒಂದನ್ನು ಪ್ರಾರಂಭಿಸಬಹುದೇ? ಹೀಗೆ ಮಾಡುವುದರಿಂದ ನಮ್ಮ ಮೆಚ್ಚಿನ ಪುಸ್ತಕಗಳ ಬಗ್ಗೆ ಮಾತನಾಡಲು ನಾವು ಪ್ರತಿ ವಾರ ಭೇಟಿಯಾಗಬಹುದು.
ಖಂಡಿತವಾಗಿಯೂ! ನಾವು ನಿಮಗೆ ಸಹಾಯ ಮಾಡುತ್ತೇವೆ.
2022 ರಷ್ಟರಲ್ಲಿ, ಜತಿನ್ ಮತ್ತು ಅವರ ತಂಡವು 36 ಹಳ್ಳಿಗಳ ಜನರಿಗೆ ಓದುವ ಸಾಮಗ್ರಿಯನ್ನು ಒದಗಿಸಿದರು. ಸಮುದಾಯ ಲೈಬ್ರರಿಯು ಪ್ರಸ್ತುತ 3,000 ಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿದೆ.
ಜತಿನ್ ಮಾಡಿದ ಪ್ರಯತ್ನಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ತಮ್ಮ ಕಾರ್ಯಕ್ರಮವಾದ ಮನ್ ಕಿ ಬಾತ್‌ನಲ್ಲಿ ಶ್ಲಾಘಿಸಿದರು.
ಶಿಕ್ಷಣ ಕ್ಷೇತ್ರದಲ್ಲಿ ಬೆಳಗುವ ಒಂದು ಸಣ್ಣ ದೀಪವೂ ಸಹ ಸಮಾಜವನ್ನು ಬೆಳಗಿಸಬಲ್ಲದು. ಬನ್ಸಾ ಗ್ರಾಮದ ಜತಿನ್ ಲಲಿತ್ ಸಿಂಗ್ ಜೀ ಶಿಕ್ಷಣದ ಜ್ವಾಲೆಯನ್ನು ಬೆಳಗಿಸುವತ್ತ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.
ಶ್ಲಾಘನೆಯಿಂದ ವಿನೀತರಾದ ಜತಿನ್ ಅವರು ಸಮುದಾಯದ ಕಲ್ಯಾಣಕ್ಕಾಗಿ ತಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸಲು ಬಯಸುತ್ತಾರೆ.
ನಾನು ಬನ್ಸಾವನ್ನು ಮಾದರಿ ಗ್ರಾಮವನ್ನಾಗಿ ಪರಿವರ್ತಿಸುವ ಉದ್ದೇಶ ಹೊಂದಿದ್ದು, ಇಲ್ಲಿ ನಾವು ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯಕ್ಕೂ ಆದ್ಯತೆ ನೀಡಲಿದ್ದೇವೆ.

# ರೋಹನ್ ಕಾಳೆ




*ಅತಿ ಆಳಕ್ಕೆ ನೀರಿನ ಮಟ್ಟದವರೆಗೆ ಇಳಿಯಲು ಉದ್ದುದ್ದ ಮೆಟ್ಟಿಲುಗಳನ್ನು ಹೊಂದಿರುವ ಬಾವಿಗಳು ಅಥವಾ ಕೊಳಗಳು.
ˆ16ನೇ ಶತಮಾನದ ಪಂಜಾಬ್ ಗವರ್ನರ್


ರೋಹನ್ ಹೆಚ್ಚಿನ ಸೋಪಾನ ಬಾವಿಗಳಿಗೆ ಭೇಟಿ ನೀಡಿದರು ಮತ್ತು ಮಹಾರಾಷ್ಟ್ರದ ಸೋಪಾನ ಬಾವಿಗಳ ಬಗ್ಗೆ ಯೋಚಿಸಲು ಆರಂಭಿಸಿದರು.
ಎಂತಹ ಭವ್ಯವಾದ ರಚನೆಗಳು. ನನಗೆ ನಂಬಲು ಸಾಧ್ಯವೇ ಇಲ್ಲ. ನನ್ನ ರಾಜ್ಯದಲ್ಲಿ ನಾನು ಇಂತಹವನ್ನು ನೋಡಿಯೇ ಇಲ್ಲ.
ಆಲೋಚನೆಯು ಕಾರ್ಯರೂಪಕ್ಕೆ ಬಂದಿತು, ಮತ್ತು ಅಂತಿಮವಾಗಿ 2020 ರಲ್ಲಿ -
ನಾನು ನನ್ನ ಕೆಲಸವನ್ನು ಬಿಡುತ್ತಿದ್ದೇನೆ.
ಏಕೆ? ಕೆಲಸ ಬಿಟ್ಟು ಏನು ಮಾಡುತ್ತೀಯ?
ನಾನು ಮಹಾರಾಷ್ಟ್ರದ ಸೋಪಾನ ಬಾವಿಗಳಿಗೆ ಭೇಟಿ ನೀಡಲು ಹೋಗುತ್ತಿದ್ದೇನೆ.
ತನ್ನ ಕೆಲವು ಸಾಮಾನುಗಳನ್ನು ಎತ್ತಿಕೊಂಡು, ರೋಹನ್ ತನ್ನ ಮೋಟಾರುಬೈಕಿನಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೋಗುತ್ತಾ, ಸೋಪಾನ ಬಾವಿಗಳಿಗೆ ಭೇಟಿ ನೀಡುತ್ತಾ....
ಇದೂ ಕೂಡ ಅಸ್ತವ್ಯಸ್ತವಾಗಿದೆ.
...ಅವುಗಳನ್ನು ನಕ್ಷೆಯ ಮೇಲೆ ಎಚ್ಚರಿಕೆಯಿಂದ ಚಿತ್ರಿಸಿಕೊಳ್ಳುತ್ತಿದ್ದನು.
ಮುಂದಿನ ಕೆಲವು ತಿಂಗಳುಗಳಲ್ಲಿ, ಮಹಾರಾಷ್ಟ್ರದ 400 ಸೋಪಾನ ಬಾವಿಗಳಿಗೆ ಭೇಟಿ ನೀಡುವಲ್ಲಿ ರೋಹನ್ ಯಶಸ್ವಿಯಾದರು.
ಮಹಾರಾಷ್ಟ್ರದಲ್ಲಿ ಸುಮಾರು 80 ಪ್ರತಿಶತದಷ್ಟು ಸೋಪಾನ ಬಾವಿಗಳು ತುಂಬಾ ಕೆಟ್ಟ ಸ್ಥಿತಿಯಲ್ಲಿವೆ. ನಾನು ಅವುಗಳಿಗೆ ಏನಾದರೂ ಮಾಡಬೇಕು.
ರೋಹನ್ ಮಹಾರಾಷ್ಟ್ರ ಸೋಪಾನ ಬಾವಿ ಅಭಿಯಾನವನ್ನು ಪ್ರಾರಂಭಿಸಿದರು ಮತ್ತು ಕೆಲವು ಸ್ವಯಂಸೇವಕರೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿದರು.
ನೀವು ಸೋಪಾನ ಬಾವಿಯನ್ನು ಸ್ವಚ್ಛಗೊಳಿಸಲು ಬಂದಿದ್ದೀರಿ ಎಂದು ನಾನು ಕೇಳಿದೆ. ಅದು ನಿಜವೇ?
ಹೌದು. ಇದನ್ನು ಸುಮಾರು 800 ವರ್ಷಗಳ ಹಿಂದೆ ನಿರ್ಮಿಸಲಾಗಿತ್ತು ಎಂಬುದು ನಿಮಗೆ ತಿಳಿದಿದೆಯೇ? ಒಮ್ಮೆ ಸ್ವಚ್ಛಗೊಳಿಸಿದರೆ, ಇಡೀ ಪಟ್ಟಣಕ್ಕೆ ನೀರು ಸಂಗ್ರಹಿಸಲು ಬಳಸಬಹುದು.


ನೀವು ಸರಿಯಾದ ಕೆಲಸವನ್ನು ಮಾಡುತ್ತಿದ್ದೀರಿ. ನಾವು ನಿಮ್ಮೊಂದಿಗೆ ಕೈಜೋಡಿಸುತ್ತೇವೆ.
ಈ ಸೋಪಾನ ಬಾವಿಗಳಲ್ಲಿ ದೀಪಗಳನ್ನು ಬೆಳಗಿಸುವ ಮತ್ತು ಹಬ್ಬಗಳನ್ನು ಆಚರಿಸುವ ನಮ್ಮ ಹಳೆಯ ಸಂಪ್ರದಾಯವನ್ನು ನಾವು ಪುನಃ ಆರಂಭಿಸಬೇಕು.
ಹೆಚ್ಚಿನ ಜನರು ಸೇರಿಕೊಂಡಿದ್ದರಿಂದ, ಕೆಲಸವು ವೇಗವಾಗಿ ಸಾಗಿದೆ.
ರೋಹನ್ ತನ್ನ ಯೋಜನೆಗಾಗಿ ಇದುವರೆಗೆ 1.5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಮತ್ತು ಮಹಾರಾಷ್ಟ್ರದಲ್ಲಿ 1,650 ಸೋಪಾನ ಬಾವಿಗಳನ್ನು ಮ್ಯಾಪ್ ಮಾಡಿ ತಲುಪಲು 14,000 ಕಿಮೀ ಪ್ರಯಾಣಿಸಿದ್ದಾರೆ.
ನೀವು ಅದ್ಭುತವಾದ ಕೆಲಸವನ್ನು ಮಾಡಿದ್ದೀರಿ, ರೋಹನ್.
ಮ್ಯಾಪಿಂಗ್ ಮಾಡಿದರೆ ಸಾಕಾಗುವುದಿಲ್ಲ. ಹೆಚ್ಚಿನ ಸೋಪಾನ ಬಾವಿಗಳನ್ನು ಮರುಸ್ಥಾಪಿಸಬೇಕಾಗಿದೆ ಮತ್ತು ಹೆಚ್ಚಿನ ಜನರು ಅವುಗಳ ಬಗ್ಗೆ ತಿಳಿದುಕೊಳ್ಳಬೇಕು. ಇದಕ್ಕಾಗಿ ನನ್ನ ಬಳಿ ಒಂದು ಯೋಜನೆ ಇದೆ.
ರೋಹನ್ ಮಹಾರಾಷ್ಟ್ರದ ಪ್ರವಾಸೋದ್ಯಮ ನಿರ್ದೇಶನಾಲಯದ ಜಂಟಿ ನಿರ್ದೇಶಕರಾದ ಡಾ. ಧನಂಜಯ್ ಸಾವಳ್ಕರ್ ಅವರನ್ನು ಭೇಟಿ ಮಾಡಿದರು.
ಸರ್, ದಯವಿಟ್ಟು ಮಹಾರಾಷ್ಟ್ರ ಪ್ರವಾಸೋದ್ಯಮ ವೆಬ್‌ಸೈಟಿನಲ್ಲಿ ಸೋಪಾನ ಬಾವಿಗಳ ವಿಭಾಗವೊಂದನ್ನು ಸೇರಿಸಿ. ನಾವು ಅವುಗಳನ್ನು ಮರುಸ್ಥಾಪಿಸಿದ್ದೇವೆ ಮತ್ತು ಅವುಗಳ ಇತಿಹಾಸವು ಪ್ರವಾಸಿಗರನ್ನು ಆಕರ್ಷಿಸುತ್ತದೆ.
ಸರಿ.. ಒಳ್ಳೆಯ ಐಡಿಯಾ!
ವಿಶ್ವ ಪ್ರವಾಸೋದ್ಯಮ ದಿನ-2022 ದಂದು, ಸೋಪಾನ ಬಾವಿಗಳ ವಿಭಾಗವನ್ನು ಮಹಾರಾಷ್ಟ್ರ ಪ್ರವಾಸೋದ್ಯಮ ವೆಬ್‌ಸೈಟಿಗೆ ಸೇರಿಸಲಾಯಿತು.
1 ಮಾರ್ಚ್, 2022 ರಂದು, ಮಹಾಶಿವರಾತ್ರಿ ಹಬ್ಬದ ಸಂದರ್ಭದಲ್ಲಿ -
ಆಹಾ ಎಂತಹ ದೃಶ್ಯ!
ನನ್ನ ಪ್ರಯತ್ನಗಳು ಅಂತಿಮವಾಗಿ ಫಲ ನೀಡುತ್ತಿರುವಂತೆ ಭಾಸವಾಗುತ್ತಿದೆ.
160 ಸೋಪಾನ ಬಾವಿಗಳನ್ನು ಸ್ವಚ್ಛಗೊಳಿಸಲಾಯಿತು ಮತ್ತು ವಿಶೇಷ ಸಂದರ್ಭಗಳಲ್ಲಿ ಅಲ್ಲಿ ದೀಪ ಬೆಳಗಿಸಲಾಯಿತು.
ರೋಹನ್ ಈಗ ಸೋಪಾನ ಬಾವಿಗಳ ಕುರಿತ ದಾಖಲೀಕರಣ ಮಾಡಲು ಆರ್ಕಿಟೆಕ್ಚರ್ ಕಾಲೇಜುಗಳೊಂದಿಗೆ ಕೆಲಸ ಮಾಡುತ್ತಿದ್ದಾರೆ.
ನಾವು ಡ್ರೋನ್ ಫೂಟೇಜನ್ನು ಸಹ ಸಿದ್ಧಪಡಿಸಲಿದ್ದೇವೆ. ಎಲ್ಲಾ ಸೋಪಾನ ಬಾವಿಗಳನ್ನು ಪುನರುಜ್ಜೀವನಗೊಳಿಸಿದರೆ, ಇದು ಜಲಸಂರಕ್ಷಣೆಯತ್ತ ಒಂದು ಮಹತ್ತರ ಹೆಜ್ಜೆಯಾಗಿರುತ್ತದೆ. ನಾವು ಬರ-ಮುಕ್ತ ಮಹಾರಾಷ್ಟ್ರವನ್ನು ಎದುರುನೋಡಬಹುದು.

# ಶ್ಯಾಮ್ ಸಿಂಗ್ ಮತ್ತು ಕುನ್ವರ್ ಸಿಂಗ್




*ಉತ್ತರಪ್ರದೇಶದ ಆಗ್ರಾ ಜಿಲ್ಲೆಯ ಒಂದು ಗ್ರಾಮ.
















* ಹಿಂದಿ ಭಾಷೆಯಲ್ಲಿ ಅಣ್ಣ
^ಮುಖ್ಯಸ್ಥ

**ಇಟ್ಟಿಗೆಗಳಿಂದ ಆವೃತವಾದ ಫುಟ್‌ಪಾತ್/ರಸ್ತೆ
^^ನೆಲದಡಿ ಸಂಗ್ರಹವಾಗಿರುವ ನೀರು


ಐದು ಕಿಲೋಮೀಟರ್ ದೂರದಲ್ಲಿ, ಬಸ್ತಾಯ್* ಕಾಲುವೆ ಇದೆ. ಸಹೋದರರು ಇದನ್ನು ಸಿಹಿನೀರಿನ ಮೂಲವಾಗಿ ಆರಿಸಿಕೊಂಡರು...
...ಅದರ ಸುತ್ತಲಿನ ಭೂಮಿಯನ್ನು ಐದು ಲಕ್ಷ ರೂಪಾಯಿಗಳಿಗೆ ಖರೀದಿಸಿದರು...
...ಮತ್ತು ಆಗಸ್ಟ್ 2018 ರಲ್ಲಿ ಐದು ಕಿಲೋಮೀಟರ್ ಉದ್ದದ ಪೈಪ್‌ಲೈನ್ ಅನ್ನು ನಿರ್ಮಿಸಲು ಪ್ರಾರಂಭಿಸಿದರು.
ಪೈಪ್‌ಲೈನ್‌ಗೆ ಸಹೋದರರಿಗೆ 27 ಲಕ್ಷ ರೂಪಾಯಿ ವೆಚ್ಚವಾಯಿತು.
ಪೈಪ್‌ಲೈನ್ ಅನ್ನು ಅಂತಿಮವಾಗಿ 2020 ರಷ್ಟರಲ್ಲಿ ನಿರ್ಮಿಸಲಾಯಿತು.
ನೀರು ಬಂತು! ಆಹಾ.. ವಾವ್!!
ಈಗ ನೆಮ್ಮದಿಯಾಯಿತು! ಕುನ್ವರ್ ಸಿಂಗ್ ಮತ್ತು ಶ್ಯಾಮ್ ಸಿಂಗ್ ಅವರನ್ನು ದೇವರು ನೆಮ್ಮದಿಯಾಗಿಟ್ಟಿರಲಿ!
ಗ್ರಾಮದಲ್ಲಿ 1,200 ಕ್ಕೂ ಹೆಚ್ಚು ಮನೆಗಳಿಗೆ ಶುದ್ಧನೀರು ಬರತೊಡಗಿತು. ಸ್ವಲ್ಪ ದಿನಗಳಲ್ಲಿಯೇ, ಕುನ್ವರ್ ಸಿಂಗ್ ಪ್ರಧಾನರಾಗಿ ಆಯ್ಕೆಯಾದರು.
ಸಹೋದರರ ನಿಸ್ವಾರ್ಥ ಕೊಡುಗೆಯು ಕಥೋರಾ ಗ್ರಾಮಕ್ಕೆ ಒಳ್ಳೆಯ ಹೆಸರು ತಂದುಕೊಟ್ಟಿತು. ಒಂದು ದಿನ ಬೆಳಗ್ಗೆ, ಸಹೋದರರಿಗೆ ಒಂದು ಮುಖ್ಯವಾದ ದೂರವಾಣಿ ಕರೆ ಬರುತ್ತದೆ.
ಶ್ಯಾಮ್ ಸಿಂಗ್ ಜೀ ಮತ್ತು ಕುನ್ವರ್ ಸಿಂಗ್ ಜೀರವರೇ, ನರೇಂದ್ರ ಮೋದಿ ಮಾತನಾಡುತ್ತಿದ್ದೇನೆ. ಕಥೋರಾ ಗ್ರಾಮಕ್ಕೆ ನೀವು ನೀಡಿದ ಅನುಕರಣೀಯ ಕೊಡುಗೆಯ ಬಗ್ಗೆ ನನಗೆ ಬಹಳ ಹೆಮ್ಮೆ ಎನಿಸುತ್ತಿದೆ.
ಧನ್ಯವಾದಗಳು ಸರ್!
ಇದೊಂದು ಆಶ್ಚರ್ಯ ಮತ್ತು ವಿಶಿಷ್ಟ ಗೌರವ!
ಇದೊಂದು ಸಣ್ಣ ಸಂಭಾಷಣೆಯಾಗಿತ್ತು ಆದರೆ ಸಹೋದರರಿಬ್ಬರೂ ಪುಳಕಗೊಂಡರು.
ಅವರಿಬ್ಬರನ್ನೂ ವಿಶೇಷ ಕಾರ್ಯಕ್ರಮಕ್ಕಾಗಿ ದೆಹಲಿಗೆ ಆಹ್ವಾನಿಸಲಾಯಿತು ಮತ್ತು ಪ್ರಧಾನಮಂತ್ರಿ ಮೋದಿಯವರ ನೇರ ಪ್ರಸಾರದಲ್ಲಿ ಅವರನ್ನು ನೆನಪಿಸಿಕೊಳ್ಳಲಾಯಿತು.
ಸಮಾಜದಲ್ಲಿ ಬದಲಾವಣೆಯನ್ನು ತರಲು ಹೆಚ್ಚು ಜನರೇನು ಬೇಕಾಗುವುದಿಲ್ಲ ಎಂಬುದನ್ನು ಸಿಂಗ್ ಸಹೋದರರು ಸಾಬೀತುಪಡಿಸಿದ್ದಾರೆ.

*ಹತ್ತಿರದ ಒಂದು ಗ್ರಾಮ

# ಗೌತಮ್ ದಾಸ್




*ತ್ರಿಪುರಾ ರಾಜ್ಯದ ರಾಜಧಾನಿ


ಕೆಲವು ವಾರಗಳ ನಂತರ, ರಾಷ್ಟ್ರದಾದ್ಯಂತ ಲಾಕ್‌ಡೌನ್ ಘೋಷಿಸಲಾಯಿತು.
ಕೆಲಸವಿಲ್ಲದೆ ಎರಡು ವಾರಗಳಾದವು. ಅಬ್ಬಾ ದೇವರೆ, ನನ್ನ ಬಳಿ ಉಳಿತಾಯ ಮಾಡಿದ್ದ ಸ್ವಲ್ಪ ಹಣವಿದೆ. ಇಲ್ಲದಿದ್ದರೆ, ನಾನು ಜೀವನ ಮಾಡಲು ಸಾಧ್ಯವಾಗುತ್ತಿರಲಿಲ್ಲ.
ದುಃಖದ ವಿಷಯವೆಂದರೆ, ಬಾಬು ಹೆಚ್ಚು ಹಣವನ್ನು ಉಳಿಸಿಲ್ಲ. ಅವನ ಮಕ್ಕಳು ನಾಲ್ಕು ದಿನಗಳಿಂದ ಆಹಾರವನ್ನೇ ಸೇವಿಸಿಲ್ಲ.
ಗೌತಮ್‌ಗೆ ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. ಬೆಳಗ್ಗೆಯಾದ ಕೂಡಲೇ -
ನಾನು ನನ್ನ ಬಳಿ ಕೂಡಿಟ್ಟುಕೊಂಡಿರುವ ಹಣದಿಂದ ಅಕ್ಕಿ ಮತ್ತು ಬೇಳೆಕಾಳುಗಳನ್ನು ಖರೀದಿಸಿ, ಅದನ್ನು ಬಾಬುಗೆ ಕೊಡುತ್ತೇನೆ.
ಸ್ವಲ್ಪ ಸಮಯದಲ್ಲೇ -
ಬಾಬು ಇಲ್ಲಿ ಬಾ. ಇವುಗಳನ್ನು ತೆಗೆದುಕೋ. ಮುಂದಿನ ವಾರ ನಾನು ಇನ್ನೂ ಹೆಚ್ಚಿನ ದಿನಸಿಯನ್ನು ತಂದುಕೊಡುತ್ತೇನೆ.
ನಾನು ನಿಮಗೆ ಹೇಗೆ ಧನ್ಯವಾದ ಹೇಳುವುದೋ ತಿಳಿಯದು!
ಗೌತಮ್ ಸಂತೋಷದಿಂದ ಮನೆಗೆ ಮರಳಿದನು ಆದರೆ ಇತರ ಕುಟುಂಬಗಳಿಗೆ ಆಹಾರವನ್ನು ಕೊಡಲು ಸಾಧ್ಯವಾಗದ ಬಗ್ಗೆ ಚಿಂತಿಸಲು ಪ್ರಾರಂಭಿಸಿದನು.
ಅವನು ಸ್ವಲ್ಪ ಸಮಯಲ್ಲೇ ಪುನಃ ಮತ್ತಷ್ಟು ಅಕ್ಕಿ ಮತ್ತು ಬೇಳೆ ಖರೀದಿಸಿ ತಂದು, ತಿನ್ನಲು ಇರದ ಎಲ್ಲರಿಗೂ ವಿತರಿಸುವ ಸಲುವಾಗಿ ಪ್ಯಾಕೆಟ್‌ಗಳನ್ನು ಮಾಡಿದನು.
ನೆರೆಹೊರೆಯಲ್ಲಿರುವ ಎಲ್ಲಾ ಕುಟುಂಬಗಳಿಗೂ ಇಷ್ಟು ಸಾಕಾಗಬಹುದು.
ಈ ಸಾಂಕ್ರಾಮಿಕ ರೋಗದ ಸಮಯದಲ್ಲಿ 160ಕ್ಕೂ ಹೆಚ್ಚು ಕುಟುಂಬಗಳಿಗೆ ಆಹಾರವನ್ನು ಒದಗಿಸಲು ಗೌತಮ್ ತನ್ನ ಉಳಿತಾಯದ ಹಣದಿಂದ 8,000 ರೂಪಾಯಿಗಳನ್ನು ಖರ್ಚು ಮಾಡಿದನು.
ಗೌತಮ್‌ನ ನಿಸ್ವಾರ್ಥ ಪ್ರಯತ್ನಗಳಿಗಾಗಿ, ಅಂದಿನ ಮುಖ್ಯಮಂತ್ರಿ ವಿಪ್ಲವ್ ಕುಮಾರ್ ದೇವ್‌ರವರು ಗೌರವಿಸಿದರು, ಜೊತೆಗೆ ಅವನಿಗೆ ಸಹಾಯ ಮತ್ತು ಬೆಂಬಲ ನೀಡುವ ಭರವಸೆ ನೀಡಿದರು.
ಗೌತಮ್ ದಾಸ್ ಅವರು, ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿಯವರಿಂದ ಶ್ಲಾಘನೆಗೊಳಪಟ್ಟರು.

# ಅರುಣ್ ಕೃಷ್ಣಮೂರ್ತಿ



ಸುಸ್ಥಿರತೆ ಎಂದರೇನು ಎಂದು ಯಾರಾದರೂ ನನಗೆ ಹೇಳಬಹುದೇ?
ನಾವು ನಮ್ಮ ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುತ್ತಾ ಜೀವನ ಸಾಗಿಸುವ ಒಂದು ವಿಧಾನವೇ ಸುಸ್ಥಿರತೆ.




ಪಾರುಲ್, ಸರಿಯಾದ ಉತ್ತರ. ಸುಸ್ಥಿರ ಜೀವನದ ಬಗ್ಗೆ ಜನರಿಗೆ ಶಿಕ್ಷಣ ನೀಡಲು ತನ್ನ ಜೀವನವನ್ನೇ ಮುಡಿಪಾಗಿಟ್ಟಿರುವ ಅರುಣ್ ಕೃಷ್ಣಮೂರ್ತಿ ಎಂಬ ವ್ಯಕ್ತಿಯ ಬಗ್ಗೆ ನಾನು ನಿಮಗೆ ಹೇಳುತ್ತೇನೆ.




ಪದವಿಯನ್ನು ಪೂರ್ಣಗೊಳಿಸಿದ ನಂತರ, ಅರುಣ್ ಕೃಷ್ಣಮೂರ್ತಿಯವರು ಹೈದರಾಬಾದಿನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು.
ನೀವು ಈ ಕಾರ್ಯವನ್ನು ತುಂಬಾ ವೇಗವಾಗಿ ಪೂರ್ಣಗೊಳಿಸಿದ್ದೀರಿ. ಅರುಣ್, ನೀವು ಒಳ್ಳೆಯ ಕೆಲಸಗಾರ!
ಹಾ! ಈಗ ಅದು ಮುಗಿದಿದೆ, ನಾನು ಇದನ್ನು ಸ್ವಚ್ಛತಾ ಡ್ರೈವ್ ಆಗಿ ಮಾಡಬಲ್ಲೆ.




ಅರುಣನ ಆಸಕ್ತಿಗಳು ಬೇರೆಯವೇ ಆಗಿದ್ದವು - ಹೀಗಾಗಿ ಅದು ಅವನನ್ನು ಎನ್ವಾಯರ್ನ್‌ಮೆಂಟಲಿಸ್ಟ್ ಫೌಂಡೇಶನ್ ಆಫ್ ಇಂಡಿಯಾ (ಇ.ಎಫ್.ಐ.) ಪ್ರಾರಂಭಿಸುವಂತೆ ಮಾಡಿತು.
ಕೆರೆಗಳು ಮತ್ತು ಸರೋವರಗಳಂತಹ ಸಿಹಿನೀರಿನ ಮೂಲಗಳನ್ನು ಸ್ವಚ್ಛಗೊಳಿಸುವುದು ಮತ್ತು ಮರುಸ್ಥಾಪಿಸುವುದು ನಮ್ಮ ಮುಖ್ಯ ಗುರಿಯಾಗಿದೆ.
ENVIRONMENTALIST FOUNDATION OF INDIA
E.F.I.


ಇ.ಎಫ್.ಐ.ನ ಭಾಗವಾಗಿ ಅರುಣ್ ಮತ್ತು ಆತನ ಸ್ವಯಂಸೇವಕರ ತಂಡವು ತ್ಯಾಜ್ಯ ನಿರ್ವಹಣೆಯಂತಹ ಅನೇಕ ರೀತಿಗಳಲ್ಲಿ ಪರಿಸರಕ್ಕಾಗಿ ಕೆಲಸ ಮಾಡುತ್ತದೆ...
ಈ ಗುಂಡಿಯನ್ನು ಆಹಾರ ತ್ಯಾಜ್ಯ ವಿಲೇವಾರಿ ಮಾಡಲು ಬಳಸಬೇಕು. ಸ್ವಲ್ಪ ಸಮಯದ ನಂತರ ಇದು ನಿಮ್ಮ ಸಸ್ಯಗಳಿಗೆ ಗೊಬ್ಬರವಾಗಿ ಪರಿವರ್ತನೆಗೊಳ್ಳುತ್ತದೆ.
...ಪ್ರಾಣಿಗಳ ರಕ್ಷಣೆ ಮತ್ತು ಪುನರ್ವಸತಿ...
STREET DOG VACCINATION DRIVE
...ಗ್ರಾಮಗಳು ಪರಿಸರ ಸ್ನೇಹಿ ಮತ್ತು ಸುಸ್ಥಿರವಾಗಲು ಸಹಾಯ ಮಾಡುವುದು...
ಸರ್, ಈ ಪೈಪುಗಳು ನಮ್ಮ ಮನೆಗಳಿಗೆ ಹೆಚ್ಚು ಶುದ್ಧ ನೀರನ್ನು ತರುತ್ತವೆಯೇ?
ಹೌದು, ಈ ಪೈಪುಗಳು ಮಳೆನೀರನ್ನು ಸಂಗ್ರಹಿಸಲು ಮತ್ತು ಆ ನೀರನ್ನು ಗೃಹಬಳಕೆ ಉದ್ದೇಶಗಳಿಗಾಗಿ ಬಳಸಲು ನಿಮಗೆ ಸಹಾಯ ಮಾಡುತ್ತವೆ.
...ಮತ್ತು ಜಲಮೂಲಗಳನ್ನು ಸ್ವಚ್ಛಗೊಳಿಸುವುದು ಮತ್ತು ರಕ್ಷಿಸುವುದು.
ಸರೋವರವನ್ನು ಸ್ವಚ್ಛಗೊಳಿಸಿದ ನಂತರ, ನಾವು ಅದರ ಸುತ್ತಲೂ ಬೇಲಿ ಹಾಕುತಿದ್ದೇವೆ. ಹೀಗೆ ಮಾಡುವುದರಿಂದ ಜನರು ಅದಕ್ಕೆ ಕಸ ಎಸೆಯಲು ಸಾಧ್ಯವಿಲ್ಲ.
ಅರುಣ್ ರವರ ಸಂಸ್ಥೆಯು 15 ಕ್ಕೂ ಹೆಚ್ಚು ರಾಜ್ಯಗಳಲ್ಲಿ ಕೆಲಸ ಮಾಡಿದೆ, ಮತ್ತು ಭಾರತದ ಪ್ರತಿಯೊಂದು ರಾಜ್ಯದಲ್ಲೂ ಕೆಲಸ ಮಾಡುವ ಗುರಿ ಹೊಂದಿದೆ.

*ಸೈಕ್‌ಲೇಕ್‌ಗಳು ಮತ್ತು ಲೇಕ್ ಸವಾರಿಯಂತಹ ಯೋಜನೆಗಳ ಮೂಲಕ ಜಾಗೃತಿ ಮೂಡಿಸುವ ಕೆಲಸವನ್ನು ಸಹ ಇ.ಎಫ್.ಐ. ಮಾಡುತ್ತಿದೆ.*









# ಪೂರ್ಣಾ ಮಾಳವತ್




*ಬುಡಕಟ್ಟು
ˆತೆಲಂಗಾಣ ರಾಜ್ಯದ ಒಂದು ಹಳ್ಳಿ

**ತೆಲಂಗಾಣ ಸೋಶಿಯಲ್ ವೆಲ್ಫೇರ್ ರೇಸಿಡೆನ್ಶಿಯಲ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಸೊಸೈಟಿ
ˆˆತೆಲಂಗಾಣ ರಾಜ್ಯದ ಒಂದು ಪಟ್ಟಣ




*ಇಂಡಿಯನ್ ಪೊಲೀಸ್ ಸರ್ವೀಸ್


ಪ್ರಪಂಚದಾದ್ಯಂತ ಪೂರ್ಣಾ ಅನೇಕ ಶಿಖರಗಳನ್ನು ಏರಿದಳು.
2016 ರಲ್ಲಿ ಮೌಂಟ್ ಕಿಲಿಮಂಜರೋ...
2017 ರಲ್ಲಿ ಮೌಂಟ್ ಎಲ್ಬ್ರಸ್...
2019 ರಲ್ಲಿ ಮೌಂಟ್ ಅಕಾನ್ಕಾಗುವಾ...
2019 ರಲ್ಲಿ ಮೌಂಟ್ ಕಾರ್ಸ್ಟೆನ್ಸ್ಜ್ ಪಿರಮಿಡ್...
2019 ರಲಿ ಮೌಂಟ್ ವಿನ್ಸನ್ ಮಾಸಿಫ್...
ಮತ್ತು ಅಂತಿಮವಾಗಿ, 2022 ರಲ್ಲಿ ಮೌಂಟ್ ದೆನಾಲಿ, ಹೀಗೆ 'ಏಳು ಶಿಖರಗಳ ಸವಾಲನ್ನು' ಪೂರ್ಣಗೊಳಿಸಿದ್ದಾಳೆ.
ಇದರ ಜೊತೆಗೆ ಪೂರ್ಣಾ, TSWREIS ನಿಂದ ಬಿ.ಎ. ಪದವಿಯನ್ನು ಸಹ ಪಡೆದಳು...
...ತದನಂತರ ಮಿನ್ನೇಸೋಟ ಸ್ಟೇಟ್ ಯೂನಿವರ್ಸಿಟಿಗೆ ಅದರ ಜಾಗತಿಕ ಪದವಿ ವಿನಿಮಯ ಕಾರ್ಯಕ್ರಮದ ಭಾಗವಾಗಿ ಹೋದಳು.
ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಅನೇಕರು ಪೂರ್ಣಾಳನ್ನು ಸನ್ಮಾನಿಸಿದ್ದಾರೆ. ಅನೇಕ ಗೌರವಗಳ ಜೊತೆಗೆ ಅವಳು 25 ಲಕ್ಷ ರೂಪಾಯಿ ನಗದು, ಒಂದು ಮನೆ ಮತ್ತು 5-ಎಕರೆ ಜಾಗವನ್ನು ಪಡೆದಿದ್ದಾಳೆ.
ತನ್ನ ದೃಢನಿರ್ಧಾರ ಮತ್ತು ಕಠಿಣ ಪರಿಶ್ರಮದಿಂದ ಲಕ್ಷಾಂತರ ಜನರಿಗೆ ಪೂರ್ಣಾ ಸ್ಫೂರ್ತಿಯಾಗಿದ್ದಾಳೆ.
ಮಹಿಳೆಯರು ತಾವು ಮಾಡಬೇಕೆಂದು ಹೊರಟಿದ್ದನ್ನು ಸಾಧಿಸಿಯೇ ತೀರುತ್ತಾರೆ ಎಂಬುದನ್ನು ಸಾಬೀತುಪಡಿಸಲು ನಾನು ಎವರೆಸ್ಟ್ ಅನ್ನು ಏರಿದೆನು.
ಪೂರ್ಣಾ ಓದಿದ್ದ ಹಳ್ಳಿಯ ಸರ್ಕಾರಿ ಶಾಲೆಗಳಲ್ಲಿ ದೊಡ್ಡ ಬದಲಾವಣೆ ಕಂಡುಬಂದಿತು. ಕೊಠಡಿಗಳು ಖಾಲಿ ಇರುತ್ತಿದ್ದ ಈ ಶಾಲೆಗಳಲ್ಲಿ ಈಗ ಪ್ರವೇಶಾತಿಗಾಗಿ ವೇಯ್ಟಿಂಗ್ ಲಿಸ್ಟುಗಳು ಇರುತ್ತವೆ- ಅತಿ ಎತ್ತರದ ಪರ್ವತವನ್ನು ಏರಿದಷ್ಟೇ ಶ್ರೇಯದ ಖುಷಿ.

# ಬಿಕ್ರಮ್‌ಜಿತ್ ಚಕ್ಮಾ




*ಜುಜುಬೆ ಬೆರ್ರಿ

^ತ್ರಿಪುರ ರಾಜ್ಯದ ಪೆಚಾರ್ತಾಲ್ ನ ಒಂದು ಗ್ರಾಮ

**ಚಕ್ಮಾ ಭಾಷೆಯಲ್ಲಿ ಚಿಕ್ಕಪ್ಪ




*ತೋಟಗಳು ಅಥವಾ ಹಸಿರುಮನೆಗಳಲ್ಲಿ ಹೂಗಳು, ಹಣ್ಣುಗಳು ಮತ್ತು ತರಕಾರಿಗಳನ್ನು ಬೆಳೆಯುವುದು

# ಮನೋಜ್ ಬೆಂಜ್ವಾಲ್




*ತಂದೆಯ ತಾಯಿ- ಅಜ್ಜಿ




*ಹಿಮಾಲಯದ ಹುಲ್ಲುಗಾವಲುಗಳು


ಮನೋಜ್ ತನ್ನ ಮಾತಿನಂತೆ ನಡೆದುಕೊಂಡಿದ್ದಾರೆ. 2019 ರಲ್ಲಿ ಅವರು ಉತ್ತರಾಖಂಡ್‌ನಲ್ಲಿ ಸೇವಾ ಇಂಟರ್‌ನ್ಯಾಶನಲ್ ಮತ್ತು ಅದರ ಕಾರ್ಯಕ್ರಮವಾದ 'ಪ್ರವಾಹ್'ಗೆ ಸೇರಿದರು.
sewa International
'ಪ್ರವಾಹ್'ದಲ್ಲಿ, ನಾವು ಪರ್ವತಗಳನ್ನು ಸ್ವಚ್ಛಗೊಳಿಸುವ ಮತ್ತು ಎಲ್ಲಾ ಪವಿತ್ರ ಸ್ಥಳಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ. ನೀರಿನ ಎಲ್ಲಾ ತೊರೆಗಳು ಪ್ಲಾಸ್ಟಿಕ್ ಮುಕ್ತವಾಗಬೇಕೆಂಬುದು ನಮ್ಮ ಬಯಕೆ. ಪ್ರಾಣಿಪಕ್ಷಿಗಳು ಈ ಪ್ರದೇಶಗಳಿಗೆ ಮರಳಿ ಬರುವಂತೆ ನಾವು ಮರ-ಗಿಡಗಳನ್ನು ನೆಡುತ್ತಿದ್ದೇವೆ.
ಮನೋಜ್ ರವರ ಕಾರ್ಯದಿಂದ ಪ್ರಭಾವಿತರಾದ ರುದ್ರಪ್ರಯಾಗದ ಜಿಲ್ಲಾ ಮ್ಯಾಜಿಸ್ಟ್ರೇಟ್ ಆದ ಮಯೂರ್ ದೀಕ್ಷಿತ್ ಅವರೊಂದಿಗೆ ಸಭೆ ನಡೆಸಿದರು.
ನೀವು ಮತ್ತು ನಿಮ್ಮ ತಂಡವು ಯಾವೆಲ್ಲಾ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದೀರಿ?
ಸರ್, ನಾವು ಅನೇಕ ಗ್ರಾಮಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇವೆ. ನಮ್ಮೆಲ್ಲಾ ಜನರಿಗೆ ಶುದ್ಧವಾದ ಕುಡಿಯುವ ನೀರು ಲಭ್ಯವಾಗಬೇಕೆಂಬುದೇ ನಮ್ಮ ಆಶಯ.
ಈ ನಿಟ್ಟಿನಲ್ಲಿ ಸರ್ಕಾರವು ನಿಮಗೆ ಹೇಗೆ ಸಹಾಯ ಮಾಡಬಹುದು?
ಸ್ಥಳೀಯ ಪಂಚಾಯತ್‌ಗಳು ಮತ್ತು ಪುರಸಭೆಗಳು ನಮಗೆ ಬೆಂಬಲ ನೀಡಿದರೆ, ನಮ್ಮ ಗುರಿಗಳನ್ನು ನಾವು ಸುಲಭವಾಗಿ ಸಾಧಿಸಬಹುದು. ಕೇದಾರನಾಥ ಮಾರ್ಗವನ್ನು ಕಸಮುಕ್ತವಾಗಿಡುವುದು ಹೇಗೆ ಎಂಬುದರ ಕುರಿತು ನನ್ನ ಬಳಿ ಹಲವು ವಿಚಾರಗಳಿವೆ.
ನಿಮಗೆ ನಮ್ಮ ಬೆಂಬಲ ಇರುತ್ತದೆ.
ಸರ್ಕಾರದ ಬೆಂಬಲ ಮತ್ತು ಮನ್ ಕಿ ಬಾತ್‌ನಲ್ಲಿ ಪ್ರಧಾನ ಮಂತ್ರಿಯವರ ಪ್ರೋತ್ಸಾಹದಿಂದ, ಮನೋಜ್ ಬೆಂಜ್ವಾಲ್ ತನ್ನ ಕನಸುಗಳು ನನಸಾಗುವುದನ್ನು ಎದುರುನೋಡಬಹುದು.



मन की बात 100

MANN KI BAAT 100

# ಮನ್ ಕಿ ಬಾತ್

## ಸಂಪುಟ 5

ರೋಹನ್ ಕಾಳೆ ಕಾರ್ಯನಿಮಿತ್ತ ಗುಜರಾತಿಗೆ ಭೇಟಿ ನೀಡಿದ್ದರು. ಆ ಸಮಯದಲ್ಲಿ ಅವರು ಗುಜರಾತಿನ ಕೆಲವು ಪ್ರಸಿದ್ಧ ಸೋಪಾನ ಬಾವಿಗಳನ್ನು ನೋಡಲು ಹೋದರು. ಆ ಸೋಪಾನ ಬಾವಿಗಳನ್ನು ಈಗಲೂ ಅತ್ಯಂತ ಚೆನ್ನಾಗಿ ಇರಿಸಿಕೊಂಡಿದ್ದರ ಬಗ್ಗೆ ಅವರಿಗೆ ಅಪಾರ ಮೆಚ್ಚಿಗೆಯಾಯಿತು. ಅದರಿಂದ ಪ್ರೇರಣೆಗೊಂಡು ಮಹಾರಾಷ್ಟ್ರದಲ್ಲಿರುವ ಸೋಪಾನ ಬಾವಿಗಳನ್ನು ಶುದ್ಧಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಶೀಘ್ರದಲ್ಲಿಯೇ ಈ ಸೋಫಾನ ಬಾವಿಗಳು ಪ್ರೇಕ್ಷಣೀಯ ಸ್ಥಳಗಳ ಪಟ್ಟಿಗಳಲ್ಲಿ ಸೇರಿ ಹೋದವು. ಹಿಂದೆ ನಡೆಯುತ್ತಿದ್ದಂತೆ ಅವುಗಳ ಸೋಪಾನಗಳ ಮೇಲೆ ಹಲವಾರು ಸಾಂಸ್ಕೃತಿಕ ಉತ್ಸವಗಳನ್ನು ಆಯೋಜಿಸಲಾಯಿತು. ನಾಡಿನ ಖ್ಯಾತ ಕಲಾವಿದರು ಅದರಲ್ಲಿ ಭಾಗವಹಿಸತೊಡಗಿದರು.

ಮನ್ ಕಿ ಬಾತ್‌ನ 5 ನೆಯ ಸಂಚಿಕೆಯಲ್ಲಿ ನಾಯರ್ ಸರ್ ಅವರು ತಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು, ದೇಶವನ್ನು ಉತ್ತಮಗೊಳಿಸಲು ಶ್ರಮಿಸಿದ ಹಲವಾರು ನಿಜ ಜೀವನದ ಹೀರೋಗಳ ಬಗ್ಗೆ ಸ್ವಾರಸ್ಯಕರವಾಗಿ ಹೇಳಿದ್ದಾರೆ. ಈ ಕಥೆಗಳು ನಮ್ಮನ್ನು ಪ್ರೇರೇಪಿಸುತ್ತವೆ. ಬದುಕಿನಲ್ಲಿ ಏನಾದರೂ ಸಾರ್ಥಕವಾದದ್ದನ್ನು ಸಾಧಿಸುವಂತೆ ಪ್ರೋತ್ಸಾಹಿಸುತ್ತವೆ.



₹99

www.amarchitrakatha.com
ISBN 978-81-19596-36-2
9 788119 596362